**CC 1471/2022**
**CW-02/ PW-02**

# ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

## CC No. 1471/2022

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟಸ್ವಾಮಿ |
| ತಂದೆಯ ಹೆಸರು | : | ತಿಮ್ಮೇಗೌಡ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಸಿ ಎ ಒ, ಪ್ರಾಥಮಿಕ ಕೃಷಿ ಸಹಕಾರ ಸಂಘ, ಬ್ರಹ್ಮಣೀಪುರ, ಚನ್ನಪಟ್ಟಣ. |
| ವಾಸಸ್ಥಳ | : | ಬ್ರಹ್ಮಣೀಪುರ, ಚನ್ನಪಟ್ಟಣ. |

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ : ದಿಃ 26.03.2026

ನಾನು 1992 ರಿಂದ ಜೂನ್-2025 ರವರೆಗೆ ಬ್ರಹ್ಮಣೀಪುರ ಪ್ರಾಥಮಿಕ ಕೃಷಿ ಸಹಕಾರ ಸಂಘದಲ್ಲಿ ಸಿ ಎ ಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 28.01.2020ರಂದು ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಿಂದ ನನಗೆ ನೋಟೀಸ್ ಬಂದಿದ್ದು ಅದನ್ನು ನಾನು ದಿ.03.02.2020 ರಂದು ಸ್ವೀಕರಿಸಿರುತ್ತೇನೆ. ಸದರಿ ಪೊಲೀಸರು ಕೋರಿರುವಂತೆ ಈ ಕೇಸಿನ ಆರೋಪಿ ಬ್ಯಾಲಯ್ಯ ತಮ್ಮ ಪ್ರಾಥಮಿಕ ಕೃಷಿ ಸಹಕಾರ ಸಂಘದಲ್ಲಿ ಆಧಾರ ಮಾಡಿ ಸಾಲ ಪಡೆದಿರುವ ಬಗ್ಗೆ ಅಸಲು ದಾಖಲೆಗಳನ್ನು ಕೊಡುವಂತೆ ಕೋರಿರುತ್ತಾರೆ. ಅದರಂತೆ ನಾನು ಲಾಳಘಟ್ಟ ಗ್ರಾಮದ ಸನಂ.74/1ರಲ್ಲಿ ವಿಸ್ತೀರ್ಣ 1 ಎಕರೆ 32 ಗುಂಟೆ ಜಮೀನನ್ನು ಆಧಾರ ಮಾಡಿ ರೂ.70,000/- ಸಾಲವನ್ನು ಪಡೆದುಕೊಂಡಿರುವ ಬಗ್ಗೆ ದಾಖಲೆಯನ್ನು ನೀಡಿರುತ್ತೇನೆ. ಪಿ ಎಸ್ ಐ ಚನ್ನಪಟ್ಟಣ ಟೌನ್ ರವರು ಸಾಕ್ಷಿಗೆ ಕಳುಹಿಸಿದ ನೋಟೀಸನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅಲ್ಪಾವಧಿ

ಮಧ್ಯಮಾವಧಿ ಸಾಲದ ಬಾಂಡ್ ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಚಾಸಾ-10ರವರಿಗೆ ದಿ 20.02.2020ರಲ್ಲಿ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ವಕೀಲರಿಂದ**

ಆರೋಪಿ ಬ್ಯಾಲಯ್ಯ ರವರಿಗೆ ಲಾಳಘಟ್ಟ ಗ್ರಾಮದ ಸನಂ.74/1ರ ಜಮೀನಿನ ಆಧಾರದ ಮೇಲೆ ದಿನಾಂಕ 01.02.2019ರಂದು ಸಾಲ ಮಂಜೂರು ಮಾಡಿದ್ದೇನೆ ಎಂದರೆ ಸರಿ. ಸಾಲ ಕೊಡುವ ಸಂದರ್ಭದಲ್ಲಿ ಸಾಲಕ್ಕಾಗಿ ಸಲ್ಲಿಸುವ ವ್ಯಕ್ತಿಯ ಕುಟುಂಬದ ವಂಶವೃಕ್ಷವನ್ನು ಪಡೆದು ಪರಿಶೀಲಿಸಿ ಸಾಲ ಕೊಡುತ್ತೇವೆ ಎಂದರೆ ಸರಿ. ಆರೋಪಿ ಬ್ಯಾಲಯ್ಯ ಮತ್ತು ಚಾಸಾ-1ರವರ ಆಧಾರ್ ಕಾರ್ಡ್ ಪರಿಶೀಲಿಸಿ ಸಾಲ ಮಂಜೂರು ಮಾಡಿದ್ದೇನೆ ಎಂದರೆ ಸರಿ. ರೂ.70,000/- ಸಾಲದ ಹಣ ಆರೋಪಿ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಚಾಸಾ-1 ನಿವೃತ್ತ ಪೊಲೀಸ್ ಸಿಬ್ಬಂದಿ ಎಂದರೆ ಸರಿ. ಆರೋಪಿ ಸಲ್ಲಿಸಿದ್ದ ದಾಖಲೆಗಳು ಸರಿ ಇದ್ದ ಮೇರೆಗೆಯೇ ಆತನ ಹೆಸರಿಗೆ 70 ಸಾವಿರ ಹಣ ಸಾಲ ಮಂಜೂರು ಮಾಡಿದ್ದೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.